## Government of Karnataka

**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 33/2021 |

ದಿನಾಂಕ 18-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾ: 6 ಪ್ರಾಸಾ: 6

| | |
|---|---|
| ಹೆಸರು | ಈರೇಶ |
| ತಂದೆಯ ಹೆಸರು | ಹನ್ಮಂತ್ರಾವ್ |
| ವಯಸ್ಸು | 46 ವರ್ಷ |
| ಉದ್ಯೋಗ | ಮುಖ್ಯ ಪೋಲಿಸ್ ಪೇದೆ ನಂಬರ್ 276 ದೇವದುರ್ಗ ಪೋಲಿಸ್ ಠಾಣೆ |
| ವಾಸಸ್ಥಳ | ದೇವದುರ್ಗ |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ:**

ನಾನು ಸುಮಾರು 5 ವರ್ಷದಿಂದ ದೇವದುರ್ಗ ಪೋಲಿಸ್ ಠಾಣೆಯಲ್ಲಿ ಪೋಲಿಸ್ ಮುಖ್ಯ ಪೇದೆಯಾಗಿ ಕರ್ತವ್ಯನಿರ್ವಹಿಸುತ್ತಿದ್ದೇನೆ.

ಚಾಸಾ-1 ರವರು ದೇವದುರ್ಗ ತಹಶೀಲ್ದಾರರು ಆಗಿರುತ್ತಾರೆ. ದಿನಾಂಕ: 24-08-2020 ರಂದು ಮಧ್ಯಾಹ್ನ 2-00 ಗಂಟೆಯಿಂದ ರಾತ್ರಿ 9-00 ಗಂಟೆಯವರೆಗೆ ನಾನು ಠಾಣಾ ಎಸ್ ಹೆಚ್ ಓ ಕರ್ತವ್ಯದಲ್ಲಿದ್ದಾಗ, ಚಾಸಾ-5 ರವರು ಪೋಲಿಸ್ ಠಾಣೆಯಲ್ಲಿ ಗಣಕ ಯಂತ್ರದಲ್ಲಿ ಪೋಲಿಸ್ ಐ ಟಿ ಕರ್ತವ್ಯದಲ್ಲಿದ್ದರು. ನನ್ನ ಹತ್ತಿರ ಬಂದು ಪಿ ಎಸ್ ಐ ರವರು ನನಗೆ ಪೋನ್ ಮಾಡಿ ದೇವದುರ್ಗದ ತಹಶೀಲ್ದಾರರಾದ ಚಾಸಾ-1 ರವರು ದೇವದುರ್ಗ ಅಯ್ಯಪ್ಪ ದವಖಾನೆ ಎದರುಗಡೆ ಗಣೇಶ ವಿಗ್ರಹ ಪ್ರತಿಷ್ಠಾಪಿಸಿ ಸ್ಪೀಕರ್ ಹಚ್ಚಿದ ಬಗ್ಗೆ ಹಾಗೂ ಅವುಗಳನ್ನು ಕಚೇರಿಗೆ ತೆಗೆದುಕೊಂಡು ಹೋಗಲು ತಿಳಿಸಿದ್ದರಿಂದ, ನೀನು ಹೋಗಿ ಸ್ಪೀಕರ್ ತೆಗೆದುಕೊಂಡು ಬಾ ಅಂತಾ ತಿಳಿಸಿದ್ದಾರೆ ಆದ ಕಾರಣ ನನ್ನ ಜೊತೆ ನೀನು ಬಾ ಅಂತಾ ತಿಳಿಸಿದ್ದರಿಂದ, ನಾನು ಅವರೊಂದಿಗೆ ಮೋಟಾರ್ ಸೈಕಲ್ ಮೇಲೆ ಕುಳಿತುಕೊಂಡು ಘಟನಾ

ಸ್ಥಳಕ್ಕೆ ಹೋಗಿರುತ್ತೆನೆ. ಆ ಸಮಯದಲ್ಲಿ ಚಾಸಾ-1 ರಿಂದ 4 ಮತ್ತು 7 ಮತ್ತು 8 ರವರು ಇದ್ದರು. ಆ ಸಮಯದಲ್ಲಿ ಅಲ್ಲಿ 1ನೇ ಆರೋಪಿ ಇದ್ದನು. ಆಗ ನಾನು ಹಾಗೂ ಚಾಸಾ-5 ರವರು ಸೇರಿಕೊಂಡು ಸ್ಪೀಕರ್ ಕೊಡಿ ಅಂತಾ ಕೇಳಿದಾಗ, ಚಾಸಾ-1 ರವರು ನಮಗೆ ತಿಳಿಸಿದ್ದಾರೆ ಎಂದು ನಾನು 1ನೇ ಆರೋಪಿಗೆ ಹೇಳಿದಾಗ, ನಿಮ್ಮ ಪಿ ಎಸ್ ಐ ರವರಿಗೆ ಫೋನ್ ಮಾಡಿ ಸ್ಪೀಕರ್ ತೆಗೆದುಕೊಂಡು ಹೋಗಲು ತಿಳಿಸಿದಾಗ, 1ನೇ ಆರೋಪಿ ಸ್ಪೀಕರ್ ತೆಗೆದುಕೊಂಡು ಹೋಗಲು ತಯಾರಾದಾಗ ನಾನು ಸ್ಪೀಕರ್ ಕೊಡಿ ಎಂದು ತೆಗೆದುಕೊಳ್ಳಲು ಹೋದಾಗ, 1ನೇ ಆರೋಪಿ ನನ್ನನ್ನು ತಳ್ಳಿ, ಸ್ಪೀಕರಗಳನ್ನು ಬೈಕ್ ಮೇಲೆ ಇರಿಸಿ ಕಳುಹಿಸಿಕೊಟ್ಟನು ಅಂತಾ ತಿಳಿಸಿದರು. ನಂತರ ತಹಶೀಲ್ದಾರರಾದ ಚಾಸಾ-1 ರವರು ತಮ್ಮ ಸಿಬ್ಬಂದಿಯವರೊಂದಿಗೆ ಜೀಪನಲ್ಲಿ ಕುಳಿತುಕೊಂಡು ಹೋದರು. ನಂತರ ಬೈಕ್ ಮೇಲೆ ಇರಿಸಿ ಕಳುಹಿಸಿಕೊಟ್ಟ 02 ಸ್ಪೀಕರ್ ಗಳನ್ನು ಸುತ್ತ ಮುತ್ತ ಹುಡುಕಲಾಗಿ ಜನೌಷಧಿ ಅಂಗಡಿ ಮುಂದುಗಡೆ ಸಾರ್ವಜನಿಕ ಸ್ಥಳದಲ್ಲಿ 02 ಸ್ಪೀಕರಗಳನ್ನು ಇಟ್ಟಿರುವುದನ್ನು ಒಂದು ಖಾಸಗಿ ಆಟೋದಲ್ಲಿ ಹಾಕಿಕೊಂಡು ಠಾಣೆ ಮುಂದೆ ಹಾಜರುಪಡಿಸಿರುತ್ತೇನೆ. ಸ್ಥಳದಲ್ಲಿ 1ನೇ ಆರೋಪಿಯೊಂದಿಗೆ 2ನೇ ಆರೋಪಿ ಇದ್ದನು ಆ ಸಮಯದಲ್ಲಿ ಕರೋನಾ ಸಾಂಕ್ರಾಮಿಕ ರೋಗ ಹರಡಿದ್ದು, ಮತ್ತು ಲಾಕ್ ಡೌನ್ ಮಾಡಲಾಗಿತ್ತು, ಸಾರ್ವಜನಿಕರು ಮಾಸ್ಕ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಳ್ಳುವ ನಿಯಮ ಇತ್ತು. ಆದರೂ ಅಲ್ಲಿದ್ದ ಜನರು ಮಾಸ್ಕ ಹಾಕಿರಲಿಲ್ಲ ಮತ್ತು ಸಾಮಾಜಿಕ ಅಂತರ ಕಾಪಾಡಿಕೊಂಡಿರಲಿಲ್ಲ ಮತ್ತು ಸ್ಪೀಕರ್‌ನಲ್ಲಿ ಹೆಚ್ಚು ಶಬ್ದ ಬರುವ ಹಾಗೆ ಮೈಕ್ ಸೌಂಡ್ ಹಚ್ಚಿದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗಿತ್ತು. ಅಲ್ಲದೆ ತಹಶೀಲ್ದಾರರ ಚಾಸಾ-1 ರವರ ಸರಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆ. ಈ ಬಗ್ಗೆ ಚಾಸಾ-1 ರವರು ದೂರು ಕೊಟ್ಟಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. ಮುದ್ದೆ ಮಾಲು ಸ್ಪೀಕರ್ ಬಾಕ್ಸ್ ಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ತನಿಖಾಧಿಕಾರಿಗಳಿಗೆ ಹೇಳಿಕೆ ಕೊಟ್ಟಿರುತ್ತೇನ

**ವಾಟೀ ಸವಾಲು: ಆರೋಪಿತರ ಪರ ಶ್ರೀ ಪಿ ಟಿ ಎನ್ ವಕೀಲರಿಂದ:-**

1. ದಿನಾಂಕ: 24-08-2020 ರಂದು ಠಾಣಾ ಎಸ್ ಹೆಚ್ ಓ ಕರ್ತವ್ಯದಲ್ಲಿ ನಾನು ಇದ್ದೇನು. ಮಾಹಿತಿ ಫೋನ್ ಮೂಲಕ ಬಂದಿರುತ್ತದೆ ನಾನು ಸ್ಥಳಕ್ಕೆ ಹೋದಾಗ ಸಂಜೆ 7-45 ಗಂಟೆ ಆಗಿತ್ತು. ನಮ್ಮ ಠಾಣೆಯ

ಸೆಂಟ್ರಿ ರವರಿಗೆ ಹೇಳಿ ನಾನು ಮತ್ತು ಚಾಸಾ-5 ರವರು ಸ್ಥಳಕ್ಕೆ ಹೋಗಿರುತ್ತೇವೆ. ಗಣೇಶ ಉತ್ಸವ ಬಂದೋಬಸ್ತ್‌ಗಾಗಿ ಎಲ್ಲಾ ಸಿಬ್ಬಂದಿಯವರು ನೇಮಕಗೊಂಡಿದ್ದರು ಹಾಗಾಗಿ ಠಾಣಾ ಎಸ್ ಹೆಚ್ ಓ ಉಸ್ತುವಾರಿಯಾಗಿ ನೇಮಿಸಲು ಸಿಬ್ಬಂದಿಯವರು ಇರಲಿಲ್ಲ. ದೇವದುರ್ಗ ಪಟ್ಟಣದಲ್ಲಿ ಆ ಸಮಯದಲ್ಲಿ ಅಂದಾಜು 25 ಕಡೆ ಗಣೇಶ ಪ್ರತಿಷ್ಠಾಪನೆ ಮಾಡಿರುತ್ತಾರೆ ನಿಖರವಾಗಿ ಹೇಳಲು ಬರುವುದಿಲ್ಲ. ಅಯ್ಯಪ್ಪ ಡಾಕ್ಟರ್ ದವಖಾನೆ ಎದುರು ಗಣೇಶ್ ಪ್ರತಿಷ್ಠಾಪನೆ 23-08-2020 ರಂದು ಆಗಿರುತ್ತದೆ. ನಮ್ಮ ಠಾಣೆಯಿಂದ ಅಯ್ಯಪ್ಪ ಡಾಕ್ಟರ್ ದವಖಾನೆ 1 ಕಿ ಮಿ ಒಳಗಡೆ ಇರುತ್ತದೆ. ಗಣೇಶ್ ಪ್ರತಿಷ್ಠಾಪನೆ ಖುಲ್ಲಾ ಜಾಗದಲ್ಲಿ ಮಾಡಿರುತ್ತಾರೆ ಆ ಜಾಗದ ಮಾಲೀಕರು ಯಾರು ಇರುವುದಿಲ್ಲ.

2. ನಾವು ಸ್ಥಳಕ್ಕೆ ಹೋದಾಗ, ಅಲ್ಲಿ 1 ಮತ್ತು 2ನೇ ಆರೋಪಿತರು ಮತ್ತು 4-5 ಜನ ಹುಡುಗರು ಇದ್ದರು ಆ ಹುಡುಗರ ಹೆಸರು ನನಗೆ ಹೇಳಲು ಆಗುವುದಿಲ್ಲ. ನಮ್ಮನ್ನು ಮತ್ತು ಆರೋಪಿತರನ್ನು ಹೊರತುಪಡಿಸಿ ಅಲ್ಲಿ ಬೇರೆ ಯಾರು ಇರಲಿಲ್ಲ. ನಾವು ಸ್ಥಳಕ್ಕೆ ಹೋದಾಗ, ಚಾಸಾ-1 ರವರು ಸ್ಪೀಕರ್ ಬಂದ್ ಮಾಡಿಸಿರುತ್ತಾರೆ. ನಾವು ಸ್ಥಳಕ್ಕೆ ಹೋದಾಗ ಚಾಸಾ-1 ರವರು ಇದ್ದರು. ಸ್ಪೀಕರನ್ನು ತೆಗೆದುಕೊಳ್ಳಲು ನಾನು ಮತ್ತು ಚಾಸಾ-5 ರವರು ಹೋಗಿರುತ್ತೇವೆ. 1ನೇ ಆರೋಪಿ ನಮ್ಮನ್ನು ತಳ್ಳಿ ಸ್ಪೀಕರ್ ತೆಗೆದುಕೊಂಡು ಹೋಗಿರುತ್ತಾನೆ. ಆ ಸಮಯದಲ್ಲಿ ನಾನು 1ನೇ ಆರೋಪಿಯ ಮೇಲೆ ದಸ್ತಗಿರಿ ಕ್ರಮ ತೆಗೆದುಕೊಂಡಿರುವುದಿಲ್ಲ. ಆರೋಪಿ ನಂಬರ್ 1 ಮತ್ತು 2 ಸ್ಪೀಕರ್ ನ್ನು ತೆಗೆದುಕೊಂಡು ಎಲ್ಲಿಗೆ ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾವು ಹುಡುಕಾಡಿದಾಗ ಸ್ಪೀಕರ್ ಗಳು ಜನೌಷಧಿ ಅಂಗಡಿ ಹತ್ತಿರ ಘಟನೆ ನಡೆದ ಅರ್ದ ಗಂಟೆಯಲ್ಲಿ ಸಿಕ್ಕಿರುತ್ತವೆ. ಜನೌಷಧಿ ಅಂಗಡಿ ಆ ಸಮಯದಲ್ಲಿ ತೆರೆದಿತ್ತು. ಅಂಗಡಿಯವರನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ಘಟನಾ ಸ್ಥಳದಲ್ಲಿ ಮತ್ತು ಸ್ಪೀಕರ್ ನ್ನು ಇಟ್ಟ ಸ್ಥಳದಲ್ಲಿ ನಾನು ಛಾಯಾ ಚಿತ್ರಗಳನ್ನು ತೆಗೆದುಕೊಂಡಿರುವುದಿಲ್ಲ.

3. ಸ್ಪೀಕರ್ ಗಳು ಯಾವ ಕಂಪನಿಯದಿತ್ತು ಅದರ ಕ್ರಮಸಂಖ್ಯೆ ನನಗೆ ಹೇಳಲು ಬರುವುದಿಲ್ಲ. ಸ್ಪೀಕರ್ ತೆಗೆದುಕೊಂಡು ಹೋದಾಗ ಆರೋಪಿತರು ನಮ್ಮನ್ನು ತಳ್ಳಿ ಸ್ಪೀಕರನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ನನ್ನ ಹೇಳಿಕೆಯಲ್ಲಿ ಕೊಟ್ಟಿದ್ದೇನೆ. ಸ್ಥಳದಲ್ಲಿ ಚಾಸಾ-1 ರವರು ಸ್ವಲ್ಪ ಹೊತ್ತು ಇದ್ದರು ನಂತರ ಸ್ಪೀಕರ್

ತೆಗೆದುಕೊಂಡು ಹೋಗಲು ತಿಳಿಸಿರುತ್ತಾರೆ. ಆ ಸಮಯದಲ್ಲಿ ಕರೋನಾ ಸಾಂಕ್ರಮಿಕ ರೋಗ ಹರಡುವ ಸಾದ್ಯತೆ ಇರುವುದರಿಂದ ಯಾರಿಗೂ ಗಣೇಶ್ ಪ್ರತಿಸ್ಥಾಪನೆ ಮಾಡಲು ಪರವಾನಿಗೆ ಕೊಟ್ಟಿರುವುದಿಲ್ಲ. ದಿನಾಂಕ: 24-08-2020 ರಂದು ನೀವು ಠಾಣಾ ಎಸ್ ಎಚ್ ಓ ಕರ್ತವ್ಯದಲ್ಲಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಮಾಹಿತಿ ಬಂದಿದ್ದು ಸ್ಥಳಕ್ಕೆ ಹೋಗಿ ಸ್ಪೀಕರ್ ತೆಗೆದುಕೊಳ್ಳಲು ಹೋದಾಗ ಆರೋಪಿತರು ತಳ್ಳಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಜನೌಷಧಿ ಅಂಗಡಿ ಹತ್ತಿರ ಸ್ಪೀಕರ್‌ಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮುದ್ದೆಮಾಲಿಗೂ ಏನೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ